## ಅಧ್ಯಾಯ 2 ಅಭ್ಯಾಸದ ಹಾಳೆ

# ದೇವರ ಯೋಜನೆ ಯಾವುದು?

I. ಅಬ್ರಹಾಮನಿಗೆ ದೇವರು ಯಾವ ಯೋಜನೆ ಪ್ರಕಟಿಸಿದನು?

1. ಅಬ್ರಹಾಮನನ್ನು ಒಂದು ದೊಡ್ಡ ________ ಮಾಡುವೆನೆಂದು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದನು. ಆದಿಕಾಂಡ 12:1, 2
2. ಅವನ ಮುಖಾಂತರವಾಗಿ ಲೋಕದ ಎಲ್ಲಾ ಕುಟುಂಬಗಳು ________ . ಆದಿಕಾಂಡ 12:3
3. ________ ಸಂತತಿಯ ಮುಖಾಂತರ ಆಶೀರ್ವಾದ ಬಂದಿತು. ಆದಿಕಾಂಡ 22:18; ಗಲಾತ್ಯ 3:16

II. ದೊಡ್ಡ ಜನಾಂಗವು ಹೇಗೆ ಬೆಳವಣಿಗೆ ಹೊಂದಿತು?

1. ದೇವರು ಯಾಕೋಬನ ಹೆಸರನ್ನು ________ ಎಂದು ಬದಲಾಯಿಸಿದನು (ಆದಿಕಾಂಡ 32:28), ________ ದೇಶದಲ್ಲಿ ಒಂದು ದೊಡ್ಡ ಜನಾಂಗವಾಗಿ ಮಾಡುವೆನು ಎಂದು ವಾಗ್ದಾನ ಮಾಡಿದನು. ಆದಿಕಾಂಡ 46:2, 3
2. ಐಗುಪ್ತಕ್ಕೆ ಹೋದ ________ ಮಂದಿಯಿಂದ (ವಿಮೋಚನಕಾಂಡ 1:5), ಸೈನಿಕರಾಗಿ ಹೊರಡತಕ್ಕವರು ________ (ಅರಣ್ಯಕಾಂಡ 1:45, 46), ________ ಲೇವಿಯರು ಐಗುಪ್ತ ಬಿಟ್ಟಾಗ ಇಸ್ರಾಯೇಲ್ಯರಾಗಿ ಇದ್ದರು. ಅರಣ್ಯಕಾಂಡ 3:39

III. ಇಸ್ರಾಯೇಲ ಜನಾಂಗ ನಿಯಮವು ಯಾವುದು?

1. ಅವರ ನಿಬಂಧನೆಯು ________ ಆಜ್ಞಾಪಿಸಲ್ಪಟ್ಟಿತು (ಧರ್ಮೋಪದೇಶ ಕಾಂಡ 4:2, 5) ಅವರಿಗೆ ________ ದಂತೆ ಕೊಡಲ್ಪಟ್ಟಿತು. ಧರ್ಮೋಪ ದೇಶಕಾಂಡ 4:7, 8
2. ಈ ಆಜ್ಞಾವಿಧಿಗಳು ಅವರು ವಶಪಡಿಸಿಕೊಳ್ಳುವ ________ ದಲ್ಲಿ ಕೈಕೊಳ್ಳ ಲ್ಪಡಬೇಕು. ಧರ್ಮೋಪದೇಶಕಾಂಡ 4:5
3. ದೇವರು ಅವರೊಂದಿಗೆ ಒಂದು ________ , ಹತ್ತು ಕಟ್ಟಳೆಗಳನ್ನು ಮಾಡಿಕೊಂಡನು. ಧರ್ಮೋಪದೇಶಕಾಂಡ 4:13
4. ಅವರು ಒಡಂಬಡಿಕೆಯನ್ನು ಕೈಕೊಂಡರೆ ಅವರು ಅವರೊಂದಿಗೆ ________ ಎಲ್ಲರೂ ಹೋಗುವರು ಮತ್ತು ________ ದಲ್ಲಿ ದೇವರು ಅವರ ದಿನಗಳನ್ನು ಹೆಚ್ಚಿಸುವನು. ಧರ್ಮೋಪದೇಶಕಾಂಡ 5:33
5. ಅವರು ನಿಂಬಂಧನೆಯನ್ನು ಮುರಿದರೆ (ಯಾಜಕಕಾಂಡ 26:14, 15), ದೇವರು ಅವರನ್ನು ________ ಮತ್ತು ಅವರ ದೇಶವು ಹಾಳುಬೀಳುವುದು. ಯಾಜಕಕಾಂಡ 26:33

IV. ಮೊದಲನೆಯ ಒಡಂಬಡಿಕೆಯೊಂದಿಗೆ ಯಾವ ಸಮಸ್ಯೆ ಇತ್ತು? ಇಬ್ರಿಯರಿಗೆ 8:6, 7

1. ನೇಮನಿಷ್ಠೆಗಳನ್ನು ಆಧಾರ ಮಾಡಿಕೊಳ್ಳುವವರೆಲ್ಲರೂ ________ .

ಗಲಾತ್ಯ 3:10

2. ಅದು ________ ಮತ್ತು ________ ಸೇವೆಯಾಗಿರುವುದು. 2 ಕೊರಿಂಥ 3:6, 7, 9
3. ಅದನ್ನು ಅಸಡ್ಡೆ ಮಾಡಿದವರು ________ ಮರಣ ದಂಡನೆ ಹೊಂದಿದರು. ಇಬ್ರಿಯ 10:28

V. ದಯೆಯನ್ನು ಒದಗಿಸುವದಕ್ಕಾಗಿ ದೇವರು ಏನು ಮಾಡುವನು?

1. ದೇವರು ಒಂದು ________ ಒಡಂಬಡಿಕೆಯನ್ನು ವಾಗ್ದಾನ ಮಾಡಿದನು ________ ಮೊದಲನೆಯ ತರದಂತಿತ್ತು. ಯೆರೆಮೀಯ 31:31, 32
2. ಎರಡನೆಯ ಒಡಂಬಡಿಕೆಯ ಅಧೀನತೆಯಲ್ಲಿ ದೇವರು ತಾನು ________ ಎಂದು ಹೇಳಿದನು. ಇಬ್ರಿಯ 8:12
3. ________ ಒಡಂಬಡಿಕೆಯ ಅಧೀನತೆಯಲ್ಲಿಯ ಅಪರಾಧಗಳಿಗಾಗಿ ಯೇಸು ಮರಣ ಹೊಂದಿದನು. ಇಬ್ರಿಯ 9:15
4. ಯೇಸುವಿನ ________ ಹೊಸ ಒಡಂಬಡಿಕೆಯನ್ನು ಪರಿಣಾಮಕಾರಿಯಾಗಿ ಮಾಡಿತು. ಇಬ್ರಿಯ 9:16, 17
5. ಆತನು ಎರಡನೆಯದನ್ನು ________ ಮೊದಲನೆಯದನ್ನು ________ . ಇಬ್ರಿಯ 10:9
6. ಎರಡನೆಯದು ಹೆಚ್ಚು ಉತ್ತಮವಾದದ್ದಾಗಿದ್ದು ________ ವಾಗ್ದಾನಗಳಿವೆ. ಇಬ್ರಿಯ 8:6; 1 ಪೇತ್ರ 1:3, 4

Copyright 1987 - Gospel Light Pub. Co., Delight, AR 71940



**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

**2**

# “ದೇವರ ಯೋಜನೆ ಯಾವುದು?”

“ದೇವರ ಯೋಜನೆ ಯಾವುದು?” ಎಂಬುದು ಪ್ರಾರಂಭದ ಅಧ್ಯಯನ ಪ್ರಶ್ನಾವಳಿಯಾಗಿ ಉಪಯೋಗಿಸಲ್ಪಡಬಹುದು ಇಲ್ಲವೇ ಅದು ತಾರ್ಕಿಕವಾಗಿ, “ಪಾಪ ಮತ್ತು ಮರಣದ ಮೂಲವು ಯಾವುದು?” ಎಂಬುದರ ನಂತರ ಬರಬಹುದು.

**ಉದ್ದೇಶ**

ಈ ಪ್ರಾಶ್ನಾವಳಿಯ ಉದ್ದೇಶವು ಪ್ರಾರಂಭದಿಂದಲೇ “ದೇವರಿಗೆ ಒಂದು ಯೋಜನೆ” ಇತ್ತೆಂಬುದನ್ನು ತೋರಿಸುವುದು. ಈ ಪಾಠದಲ್ಲಿ ಶಿಕ್ಷಕನು, ಹಳೇ ಒಡಂಬಡಿಕೆಯು ಒಂದು ಜನಾಂಗಕ್ಕೆ, ಇಸ್ರಾಯೇಲ ಜನಾಂಗಕ್ಕೆ ಮಾರ್ಗದರ್ಶನವನ್ನು ಮತ್ತು ನಿಯಮಗಳನ್ನು ಒದಗಿಸಿತು, ಹಾಗೂ ಹೊಸ ಒಡಂಬಡಿಕೆಯು ಕ್ರೈಸ್ತರಿಗೆ ಮಾರ್ಗದರ್ಶಿಯಾಗಿರುವುದು ಎಂಬುದನ್ನು ತೋರಿಸುವನು.

**ಸಂಕ್ಷಿಪ್ತದಲ್ಲಿ ಪಾಠ**

ದೇವರು ಅಬ್ರಹಾಮನಿಗೆ ಅವನನ್ನು ದೊಡ್ಡ ಜನಾಂಗವಾಗಿ ಮಾಡುವೆನೆಂದೂ ಮತ್ತು ಅವನ ಸಂತತಿಯವನ ಅಂದರೆ, ಕ್ರಿಸ್ತನ ಮುಖಾಂತರ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವೆನೆಂದೂ ತನ್ನ ಯೋಜನೆಯನ್ನು ಪ್ರಕಟಿಸಿದನು. ಈ ಜನಾಂಗವು ಐಗುಪ್ತದಲ್ಲಿ ಬೆಳವಣಿಗೆ ಹೊಂದಿತು. ದೇವರು ಸಿನಾಯಿ ಪರ್ವತದ ಬಳಿಯಲ್ಲಿ ಮೋಶೆಯ ಮುಖಾಂತರ ಅವರಿಗೆ ಒಂದು ಧರ್ಮಶಾಸ್ತ್ರವನ್ನು ಕೊಟ್ಟನು. ಈ ಧರ್ಮಶಾಸ್ತ್ರವು *ಆಶೀರ್ವಾದ* ತರಲಿಲ್ಲ, ಆದರೆ ಅವರನ್ನು *ಶಾಪ*ದೊಳಗೆ ತಂದಿತು. ದೇವರು ವಾಗ್ದಾನ ಮಾಡಿದಂತೆ ಆಶೀರ್ವಾದವು ಯೇಸುವಿನ ಮುಖಾಂತರ ಬಂದಿತು.

**ಪೀಠಿಕೆ**

[ಶಿಕ್ಷಕನು “ಪಾಪದ ಮತ್ತು ಮರಣದ ಮೂಲವು ಯಾವುದು?” ಎಂಬುದನ್ನು ಮೊದಲನೆಯದಾಗಿ ಉಪಯೋಗಿಸಿದ್ದರೆ, ಅವನು ಸಂಕ್ಷೇಪವಾಗಿ ಪುನರಾವಲೋಕಿಸಬೇಕು.] ಆದಾಮ ಮತ್ತು ಹವ್ವರ ಮುಖಾಂತರ ಪಾಪವು ಲೋಕದೊಳಗೆ ಬಂದಿತು. ಇದು ಸಂಭವಿಸುವದೆಂದು ದೇವರು ಮೊದಲೇ ತಿಳಿದಿದ್ದನು. ಆದುದರಿಂದ ಆತನು ಆಗಲೇ ಪಾಪದ ಕ್ಷಮಾಪಣೆಯನ್ನು ತರುವ ಯೋಜನೆಯನ್ನು ಸಿದ್ಧಪಡಿಸಿದ್ದನು. ಈ ಪಾಠವು ದೇವರ ಯೋಜನೆಯನ್ನು ತಿಳಿಸುವುದು.

**I. ಯೋಜನೆಯು ಪ್ರಕಟಿಸಲ್ಪಟ್ಟದ್ದು**

1. ದೇವರ ಯೋಜನೆಯನ್ನು ಯೋಚಿಸುವದರಲ್ಲಿ, ಬೈಬಲಿನಲ್ಲಿ ಬಹಳ

ಮೊದಲಿನಿಂದಲೇ, ಬೈಬಲಿನ ಪ್ರಾರಂಭದ ಸಮೀಪದಲ್ಲಿಯೇ ನಾವು ಪ್ರಾರಂಭಿಸತಕ್ಕದ್ದು. ದೇವರು ತನ್ನ ಯೋಜನೆಯನ್ನು ಅಬ್ರಹಾಮನೆಂದು ಅನಂತರದಲ್ಲಿ ಹೆಸರು ಬದಲಾಯಿಸಲ್ಪಟ್ಟ ಅಬ್ರಾಮನಿಗೆ ಪ್ರಕಟಿಸಿದನು. (ಆದಿಕಾಂಡ 17:5; "ಅಬ್ರಾಮ" ಅಂದರೆ "ಪ್ರಶಂಸಿಲ್ಪಟ್ಟ ತಂದೆ" ಎಂದರ್ಥ, ಮತ್ತು "ಅಬ್ರಹಾಮ" ಅಂದರೆ "ಸಮೂಹದ ತಂದೆ" ಎಂದು ಅರ್ಥವಾಗುತ್ತದೆ.)

ದೇವರ ವಾಗ್ದಾನವು *ಎರಡು* ಪ್ರಮುಖ ವಿಷಯಗಳನ್ನು ಒಳಗೊಂಡಿತ್ತು. ಅಬ್ರಾಮನು ಸ್ವದೇಶವನ್ನು ಬಿಟ್ಟು ಹೋದರೆ ದೇವರು ಅವನಿಗೆ ಏನನ್ನು ವಾಗ್ದಾನ ಮಾಡಿದನು? [ಓದಿರಿ ಆದಿಕಾಂಡ 12:1, 2.] ದೇವರು ಅಬ್ರಾಮನನ್ನು *ಯಾವ* ದೊಡ್ಡದನ್ನಾಗಿ ಮಾಡುವೆನೆಂದು ವಾಗ್ದಾನ ಮಾಡಿದನು? [ಖಾಲಿಯಾದ ಸ್ಥಳದಲ್ಲಿ "ಜನಾಂಗ" ಎಂದು ತುಂಬಿರಿ.]

2. ದೇವರು ಇನ್ನೊಂದು ದೊಡ್ಡ ವಾಗ್ದಾನವನ್ನು ಕೂಡಿಸಿದನು ಅದು ಯಾವುದಾಗಿತ್ತು? [ಆದಿಕಾಂಡ 12:3 ಓದಿರಿ.] ಅಬ್ರಹಾಮನ ಮುಖಾಂತರ ಭೂಲೋಕದ ಎಲ್ಲಾ ಜನಾಂಗಗಳು *ಏನಾಗುವವು?* [ಖಾಲಿಯಾದ ಸ್ಥಳದಲ್ಲಿ "ಆಶೀರ್ವಾದಿಸಲ್ಪಡವರು" ಎಂದು ಬರೆಯಿರಿ.]

[ಅಧ್ಯಯನ *ಪ್ರಶ್ನಾವಳಿ ಹಿಂದೆ* "ಅಬ್ರಹಾಮ" ಎಂದು, ಆ ಮೇಲೆ 1. "ಜನಾಂಗ" ಮತ್ತು 2. "ಆಶೀರ್ವಾದ" ಎಂದು ಬರೆಯಿರಿ. ಪುಟ 132ನ್ನು ನೋಡಿರಿ.]

3. ಆಶೀರ್ವಾದವು ಅಬ್ರಹಾಮನ ಮುಖಾಂತರ ಬಂದರೂ, ಅದು ಅವ*ನಿಂದ* ಒದಗಿಸಲ್ಪಡುವ*ದಿಲ್ಲ*. ಇದು ಹೇಗೆ ಸಾಧಿಸಲ್ಪಡುವುದು? [ಓದಿರಿ ಆದಿಕಾಂಡ 22:18 ಮತ್ತು ಆದಿಕಾಂಡ 3:16.] ಆಶೀರ್ವಾದವು ಅಬ್ರಹಾಮನ *ಸಂತತಿ*ಯಲ್ಲಿ ಒಬ್ಬನಿಂದ ಒದಗಿಸಲ್ಪಡುವುದು. ಅಬ್ರಹಾಮನ ಆ ವಂಶಜನು *ಯಾರು?* [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತ" ಎಂದು ಬರೆಯಿರಿ.] ಕ್ರಿಸ್ತನು ತರುವ ಆಶೀರ್ವಾದವು ಇಸ್ರಾಯೇಲ ಜನಾಂಗಕ್ಕೆ ಮಾತ್ರವೇ ಅಲ್ಲ, ಆದರೆ ಲೋಕದ *ಎಲ್ಲಾ* ಜನಾಂಗಗಳಿಗಾಗಿಯೂ ಇರುತ್ತದೆ. [ಅಧ್ಯಯನ *ಪ್ರಶ್ನಾವಳಿಯ ಹಿಂದೆ* "ಆಶೀರ್ವದಿಸು" ಎಂಬುದರಿಂದ ಒಂದು ಗೆರೆಯನ್ನು ಎಳೆದು, "ವಂಶ" ಇಲ್ಲವೇ "ಸಂತತಿ" ಎಂದು ಬರೆಯಿರಿ. ಅನಂತರ ಪೇಪರಿನ ಬಲಗಡೆಗೆ ಒಂದು ಗೆರೆಯನ್ನು ಎಳೆದು, ಒಂದು ಶಿಲುಬೆಯನ್ನು ಗೆರೆಗಳಿಂದ ಎಳೆಯಿರಿ. ಪುಟ 132ನ್ನು ನೋಡಿರಿ.]

ಅಬ್ರಹಾಮನಿಗೆ ಮಾಡಿದ ಈ *ಎರಡು* ವಾಗ್ದಾನಗಳನ್ನು ಅವಲಂಭಿಸಿ ಬೈಬಲು ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಹಳೇ ಒಡಂಬಡಿಕೆಯ ಪ್ರಮುಖ ಚಿಂತನೆಯು ಅಬ್ರಹಾಮನಿಂದ ಬೆಳವಣಿಗೆ ಹೊಂದಿದ *ಜನಾಂಗ,* ಮತ್ತು ಹೊಸ ಒಡಂಬಡಿಕೆಯ ಚಿಂತನೆಯು ಯೇಸುಕ್ರಿಸ್ತನ ಮುಖಾಂತರ ಸಾಧ್ಯವಾಗಿ ಮಾಡಲ್ಪಟ್ಟ *ಆಶೀರ್ವಾದ ವಾಗಿರುವುದು.* ಒಬ್ಬನು *ಜನಾಂಗದ* ಬಗ್ಗೆ ಓದಲು ಬಯಸಿದರೆ, ಅವನು ಹಳೆ ಒಡಂಬಡಿಕೆಯನ್ನು ಓದುವನು. *ಆಶೀರ್ವಾದದ* ಬಗ್ಗೆ ಒಬ್ಬನು ಓದಲು ಬಯಸಿದರೆ, ಅವನು ಹೊಸ ಒಡಂಬಡಿಕೆಯನ್ನು ಓದುವನು.

## II. ಜನಾಂಗದ ಬೆಳವಣಿಗೆ

1. ಆದಿಕಾಂಡ ಪುಸ್ತಕದ ಉಳಿದ ಭಾಗವು ದೊಡ್ಡ ಜನಾಂಗವಾಗುವ ಬೆಳವ ಣಿಗೆಯ ಕಡೆಗೆ ನಡಿಸುವ ಘಟನೆಗಳನ್ನು ಕುರಿತಾಗಿರುವುದು. ಯಾಕೋಬನು ದೊಡ್ಡ ಜನಾಂಗದ ಬೆಳವಣಿಗೆಯಲ್ಲಿ ಪ್ರಮುಖನಾದವನಾಗಿರಬೇಕಾದದ್ದರಿಂದ ದೇವರು ಅವನ ಹೆಸರನ್ನು ಬದಲಾಯಿಸಿದನು. [ಓದಿರಿ ಆದಿಕಾಂಡ 32:28.] ಯಾಕೋಬನ

ಹೆಸರನ್ನು ದೇವರು *ಯಾವುದಕ್ಕೆ* ಬದಲಾಯಿಸಿದನು? [ಖಾಲಿಯಾದ ಸ್ಥಳದಲ್ಲಿ "ಇಸ್ರಾಯೇಲ" ಎಂದು ಬರೆಯಿರಿ ಇದರ ಅರ್ಥ "ದೇವರ ಸಂಗಡ ಹೋರಾಡಿದವ" ಎಂದರ್ಥ.] ಇಸ್ರಾಯೇಲ್ಯರು *ಯಾಕೋಬನ ವಂಶಜರು* ಬೈಬಲನ್ನು ಓದುವಾಗ ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ಜನಾಂಗ ಮತ್ತು ಇಸ್ರಾಯೇಲಿನ ಮಕ್ಕಳು ಯಾಕೋಬನ ವಂಶಜರಾಗಿರುವರು. [*ಹಿಂದಿನ* ಪುಟದಲ್ಲಿ "ಅಬ್ರಹಾಮನ" ಕೆಳಗೆ "ಇಸಾಕ," ಎಂದು ಬರೆಯಿರಿ ಮತ್ತು ಇವನು ಅಬ್ರಹಾಮನ ಮಗನು ಎಂದು ವಿವರಿಸಿ ಹೇಳಿರಿ ಅದರ ಕೆಳಗೆ "ಯಾಕೋಬ (ಇಸ್ರಾಯೇಲ)," ಎಂದು ಬರೆಯಿರಿ ಮತ್ತು ಇವನು ಇಸಾಕನ ಮಗನು ಎಂದು ವಿವರಿಸಿ ಹೇಳಿರಿ. ಯಾಕೋಬನ ಹೆಸರಿನ ಕೆಳಗೆ "12" ಎಂದು ಬರೆಯಿರಿ ಮತ್ತು ಯಾಕೋಬನಿಗೆ ಹನ್ನೆರಡು ಜನ ಗಂಡು ಮಕ್ಕಳಿದ್ದರು, ಅವರಿಂದ ಇಸ್ರಾಯೇಲಿನ ಹನ್ನೆರಡು ಗೋತ್ರಗಳು ಬಂದವು ಎಂದು ವಿವರಿಸಿರಿ. ಪುಟ 132ನ್ನು ನೋಡಿರಿ.]

[ಈ ಸಮಯದಲ್ಲಿ ಶಿಕ್ಷಕನು, ಯಾಕೋಬನ ಮಕ್ಕಳು ತಮ್ಮ ಸಹೋದರ ಯೋಸೇಫನನ್ನು ಮಾರಿದ್ದನ್ನು, ಅವನು ಐಗುಪ್ತಕ್ಕೆ ತೆಗೆದುಕೊಂಡು ಹೋಗಲ್ಪಟ್ಟದ್ದನ್ನು ವಿವರಿಸತಕ್ಕದ್ದು. ಪೋಟಿಫರನ ಮನೆಯಲ್ಲಿ ಸೇವೆ ಮಾಡಿದನಂತರ, ಪೋಟಿಫರನ ಹೆಂಡತಿಯಿಂದ ಸುಳ್ಳು ದೋಷಾರೋಪಾಣೆಯಿಂದ ಯೋಸೇಫನು ಸೆರೆಮನೆಗೆ ಹಾಕಲ್ಪಟ್ಟನು. ಪಾನದಾಯಕರಲ್ಲಿ ಮತ್ತು ಭಕ್ಷಕಾರರಲ್ಲಿ ಮುಖ್ಯಸ್ಥರಾಗಿದ್ದವರ ಕನಸುಗಳ ಅರ್ಥವನ್ನು ಹೇಳಿದನು. ಭಕ್ಷಕಾರನು ಅನಂತರದಲ್ಲಿ ತನ್ನ ಕನಸಿನ ಅರ್ಥ ಹೇಳಿದ ಯೇಸೇಫನು ಫರೋಹನ ಕನಸಿನ ಅರ್ಥ ಹೇಳಬಹುದೆಂದು ಫರೋಹನಿಗೆ ತಿಳಿಸಿದನು. ಫರೋಹನ ಕನಸನ್ನು ಯೋಸೇಫನು ವಿವರಿಸಿದ್ದರಿಂದ, ಬರಲಿಕ್ಕಿದ್ದ ಮುಂದಿನ ಏಳು ವರ್ಷಗಳ ಬರಗಾಲಕ್ಕಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಕಾರ್ಯ ಯೋಸೇಫನಿಗೆ ಕೊಡಲ್ಪಟ್ಟಿತು.

ಬರಗಾಲ ಬಂದಾಗ, ಯಾಕೋಬನು ಯೋಸೇಫನ ಸಹೋದರರನ್ನು ಆಹಾರ ಧಾನ್ಯಗಳಿಗಾಗಿ ಐಗುಪ್ತಕ್ಕೆ ಕಳುಹಿಸಿದನು. ಆಹಾರ ಧಾನ್ಯಗಳಿಗಾಗಿ ತನ್ನ ಸಹೋದರರು ಎರಡನೆಯ ಸಲ ಐಗಪ್ತಕ್ಕೆ ಬಂದಾಗ, ಯೋಸೇಫನು ತಾನು ಅವರ ಸಹೋದರನೆಂಬುದನ್ನು ಬಹಿರಂಗಪಡಿಸಿದನು. ತಮ್ಮ ತಂದೆಯನ್ನು ಐಗುಪ್ತಕ್ಕೆ ಕರೆತರಬೇಕೆಂದು ಹೇಳಿದನು. ಐಗುಪ್ತಕ್ಕೆ ಬರಲು ಯಕೋಬನಿಗೆ ಅವರು ಹೇಳಿದಾಗ, ಐಗುಪ್ತಕ್ಕೆ ಹೋಗಬೇಕೋ ಬೇಡವೋ ಎಂಬುದರ ಬಗ್ಗೆ ಯಾಕೋಬನು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಅವನು ಇದನ್ನು ಯೋಚಿಸುತ್ತಿದ್ದಾಗ, ದೇವರು ಅವನಿಗೆ ಕಾಣಿಸಿಕೊಂಡನು.]

ದೇವರು ಯಾಕೋಬನಿಗೆ ಏನನ್ನು ಹೇಳಿದನು? [ಓದಿರಿ ಆದಿಕಾಂಡ 46:2, 3.] ಯಾವ ದೇಶದಲ್ಲಿ ಯಾಕೋಬನ ವಂಶಜರು ದೊಡ್ಡ ಜನಾಂಗವಾಗಿ ಬೆಳೆಯುವರು? [ಖಾಲಿಯಾದ ಸ್ಥಳದಲ್ಲಿ "ಐಗುಪ್ತ" ಎಂದು ತುಂಬಿರಿ. *ಹಿಂದಿನ* ಪುಟದಲ್ಲಿ ಬೌರೋನ ತೆಗೆದು, ಅದರಲ್ಲಿ "ಐಗುಪ್ತ" ಎಂದು ಬರೆಯಿರಿ. ಪುಟ 132ನ್ನು ನೋಡಿರಿ.]

2. ಯಾಕೊಬನು ತನ್ನ ಎಲ್ಲಾ ಮಕ್ಕಳನ್ನೂ ಮೊಮ್ಮಕ್ಕಳನ್ನೂ ತನ್ನೊಂದಿಗೆ ಐಗುಪ್ತಕ್ಕೆ ಕರೆದುಕೊಂಡು ಹೋದನೋ? ಅವನೊಂದಿಗೆ *ಎಷ್ಟು ಜನರು* ಹೋದರು? [ಓದಿರಿ ವಿಮೋಚನಕಾಂಡ 1:5.] ಯಾಕೋಬನೊಂದಿಗೆ ಐಗುಪ್ತಕ್ಕೆ ಎಷ್ಟು ಜನರು ಬಂದರು? [ಖಾಲಿಯಾದ ಸ್ಥಳದಲ್ಲಿ "70" ಎಂದು ಬರೆಯಿರಿ.]

ಇವರು ವೇಗವಾಗಿ ವೃದ್ಧಿಗೊಂಡರು. [ಓದಿರಿ ವಿಮೋಚನಕಾಂಡ 1:7-9.] ಮೋಶೆಯು ಅವರನ್ನು ಐಗುಪ್ತದಿಂದ ಹೊರಗೆ ತಂದ ಮೇಲೆ, ಮೋಶೆ ಮತ್ತು ಆರೋನರು

ಖಾನೆಷುಮಾರಿ ತೆಗದುಕೊಳ್ಳಬೇಕೆಂದು ಆಜ್ಞಾಪಿಸಲ್ಪಟ್ಟರು. ಖಾನೆಷುಮಾರಿಯಲ್ಲಿ ಯಾರು ಒಳಗೊಳ್ಳಲ್ಪಡಬೇಕಾಗಿತ್ತು? [ಓದಿರಿ ಅರಣ್ಯಕಾಂಡ 1:1-3.] ಅವರ ಸೈನ್ಯದಲ್ಲಿ *ಎಷ್ಟು* ಜನ ಪುರುಷರಿದ್ದರು? [ಓದಿರಿ ಅರಣ್ಯಕಾಂಡ 1:45, 46.] ಸೈನ್ಯದಲ್ಲಿ ಎಷ್ಟು ಜನರಿದ್ದರು? [ಖಾಲಿಯಾದ ಸ್ಥಳದಲ್ಲಿ "603,550" ತುಂಬಿರಿ.] ಈ ಸಂಖ್ಯೆಯಲ್ಲಿ ಯಾರು ಕೂಡಿಸಲ್ಪಡಲಿಲ್ಲ ಮತ್ತು ಯಾಕೆ? [ಓದಿರಿ ಅರಣ್ಯಕಾಂಡ 1:47-50.] ಯಾಜಕರು ಸೈನ್ಯದೊಂದಿಗೆ ಎಣಿಸಲ್ಪಡಲಿಲ್ಲ ಯಾಕಂದರೆ ಇಸ್ರಾಯೇಲ ಜನಾಂಗದ ಧಾರ್ಮಿಕ ವಿಷಯಗಳ ಜಾವಾಬ್ದಾರಿಕೆಯನ್ನು ಅವರು ವಹಿಸಿಕೊಳ್ಳಬೇಕಾಗಿತ್ತು.

ಲೇವಿಯರಲ್ಲಿ ಯಾರು ಮತ್ತು ಅವರಲ್ಲಿ *ಎಷ್ಟು ಜನರು* ಎಣಿಸಲ್ಪಟ್ಟರು? [ಓದಿರಿ ಅರಣ್ಯಕಾಂಡ 3:39.] [ಖಾಲಿಯಾದ ಸ್ಥಳದಲ್ಲಿ "22,000" ಎಂದು ಬರೆಯಿರಿ. *ಹಿಂದಿನ ಪುಟದಲ್ಲಿ* "603,550" ಮತ್ತು "22,000" ಐಗುಪ್ತದಿಂದ ಹೊರಗೆ ಹೋದವರೆಂದು ಬರೆಯಿರಿ. [ಪುಟ 132ನ್ನು ನೋಡಿರಿ.] ಇಸ್ರಾಯೇಲದಲ್ಲಿ 603,550 ಸೈನಿಕರೂ ಲೇವಿಗೋತ್ರದಲ್ಲಿ 22,000 ಪುರುಷರೂ ಇದ್ದರು. ಹಲ ವಾರು ಲೆಕ್ಕಾಚಾರಗಳು ಅಂಥ ಸಂಖ್ಯೆಯ ಸೈನ್ಯ ಮತ್ತು ಅಷ್ಟು ಜನ ಯಾಜಕರು ಇದ್ದರೆ ಜನಾಂಗದಲ್ಲಿ ಮೂರು ಮತ್ತು ಐದು ಮಿಲಿಯ ಸಂಖ್ಯೆಯ ಮಧ್ಯದಲ್ಲಿ ಜನರಿದ್ದಿರಬಹುದೆಂದು ಹೇಳುತ್ತವೆ.

ಕಾನಾನ ದೇಶದಲ್ಲಿ ಬಹಳ ಸಣ್ಣ ಸಂಖ್ಯೆಯೊಂದಿಗೆ ಪ್ರಾರಂಭಿಸಿ. ಇಸ್ರಾಯೇಲು ದೇವರು ವಾಗ್ದಾನ ಮಾಡಿದಂತೆ ಜನ ಸಮೂಹವಾಗಿ ಬೆಳೆಯಿತು. [ನಿಮ್ಮಲ್ಲಿ ಒಂದು ನಕಾಸೆಯಿದ್ದರೆ, ಪಲೆಸ್ತೀನಿಗೆ ಅಬ್ರಹಾಮನ ಪ್ರಯಾಣವನ್ನು ಗುರುತಿಸಿರಿ ಮತ್ತು ಅವನ ವಂಶಜರ ಐಗುಪ್ತದೊಳಗಿನ ಮತ್ತು ಅನಂತರ ಸಿನಾಯಿ ಬೆಟ್ಟಕ್ಕೆ ಚಲಿಸಿದ್ದನ್ನು ಗುರುತಿಸಿರಿ.]

## III. ಜನಾಂಗಕ್ಕಾಗಿ ಧರ್ಮಶಾಸ್ತ್ರ

1. ಇಸ್ರಾಯೇಲನ (ಯಾಕೋಬನ) ಸಂತತಿಯವರು ಐಗುಪ್ತಕ್ಕೆ ಬಂದಾಗ, ಜನರು ಒಂದು ಚಿಕ್ಕ ಕುಟುಂಬವಾಗಿದ್ದು ಒಂದು ಜನಾಂಗವಾಗಿ ನಿಯಮದ ಅವಶ್ಯಕತೆಯುಳ್ಳವರಾಗಿರಲಿಲ್ಲ. ಅವರು ಐಗುಪ್ತದಲ್ಲಿದ್ದಾಗ ಐಗುಪ್ತರ ನಿಯಮಗಳಿಂದ ಜೀವಿಸಲು ಒತ್ತಾಯಿಸಲ್ಪಟ್ಟರು. ಆದರೆ ಈಗ ಜನಾಂಗದ ಸ್ವತಂತ್ರ ದೇಶವಾಗಿ ಬೆಳೆದಿದ್ದರು, ಅವರಿಗೆ ಒಂದು ರಾಷ್ಟ್ರೀಯ ನಿಯಮದ ಅವಶ್ಯಕತೆ ಇತ್ತು.

ಅವರ ನಿಯಮವನ್ನು ಅವರಿಗೆ ಯಾರು ಕೊಟ್ಟರು? [ಓದಿರಿ ಧರ್ಮೋಪದೇಶ ಕಾಂಡ 4:2, 5.] *ಯಾರ* ನಿಯಮವನ್ನು ಮೋಶೆ ಅವರಿಗೆ ಕೊಟ್ಟನು? [ಖಾಲಿಯದ ಸ್ಥಳದಲ್ಲಿ "ಕರ್ತನ" ಎಂದು ತುಂಬಿರಿ.] ಇದು ಇಡೀ ಲೊಕಕ್ಕಾಗಿ, ಇದ್ದ ನಿಯಮವಾಗಿರಲಿಲ್ಲ, ಆದರೆ ಅವರಿಗಾಗಿ ಇತ್ತು. [ಓದಿರಿ ಧರ್ಮೋಪದೇಶಕಾಂಡ 4:7, 8; ಕೀರ್ತನೆ 147:19, 20 ಸಹ ಓದಿರಿ.] ಅವರಿಗೆ ಈ ನಿಬಂಧನೆಯು *ಯಾವುದರಂತೆ* ಇತ್ತು? [ಖಾಲಿಯಾದ ಸ್ಥಳದಲ್ಲಿ "ಜನಾಂಗ" ಎಂದು ತುಂಬಿರಿ.] ದೇವರು ಅವರಿಗೆ ಕೊಟ್ಟ ಈ ಜನಾಂಗಿಕ ನಿಬಂಧನೆಯು ಧಾರ್ಮಿಕ ಮತ್ತು ನೈತಿಕ ನಿಬಂಧನೆಯಾಗಿತ್ತು.

2. ಈ ನಿಬಂಧನೆಯು ಎಲ್ಲಿ ಕೈಕೊಳ್ಳಲ್ಪಡಬೇಕಿತ್ತು? [ಓದಿರಿ ಧರ್ಮೋಪದೇಶ ಕಾಂಡ 4:5.] ಅವರು *ಎಲ್ಲಿ* ಕೈಕೊಳ್ಳಬೇಕಿತ್ತು? [ಖಾಲಿಯಾದ ಸ್ಥಳದಲ್ಲಿ "ದೇಶ" ಎಂದು ತುಂಬಿರಿ.] ನಿಬಂಧನೆಯ ಸ್ವಭಾವವು ಅದು ಭೂಲೋಕದ ನಿವಾಸಿಗಳಿಗಾಗಿ ಒಂದು ನಿಬಂಧನೆಯಾಗಿರಲಿಲ್ಲ, ಆದರೆ ಇಸ್ರಾಯೇಲ್ ದೇಶದಲ್ಲಿ ವಾಸಿಸುವ ನಿವಾಸಿಗಳಿಗಾಗಿ ನಿಬಂಧನೆಯಾಗಿತ್ತೆಂಬುದನ್ನು ಸೂಚಿಸುತ್ತದೆ.

ಇಸ್ರಾಯೇಲ್ ದೇಶದಿಂದ ಸಾವಿರಾರು ಮೈಲುಗಳ ದೂರದಲ್ಲಿ ವಾಸಿಸುವವರಿಗೆ ನಿಬಂಧನೆಯು ಹುಟ್ಟಿಸುವ ಸಮಸ್ಯೆಗಳನ್ನು ಗಮನಿಸಿರಿ. ಎಲ್ಲಾ ಪುರುಷರು ದೇವರು ಆಯ್ದುಕೊಂಡ ಸ್ಥಳವಾದ ಯೆರೂಸಲೇಮಿನಲ್ಲಿ ವರ್ಷದಲ್ಲಿ ಮೂರು ಸಲ ಕಾಣಿಸಿಕೊಳ್ಳ ಬೇಕಾಗಿತ್ತು (ಧರ್ಮೋಪದೇಶಕಂಡ 16:16). ದೇವರು ಹುಡುಕಲ್ಪಡಬೇಕಾದ ಮತ್ತು ಅವರು ತಮ್ಮ ದಶಮಾಂಶಗಳನ್ನೂ ಅರ್ಪಣೆಗಳನ್ನೂ ತರಬೇಕಾದ ಸ್ಥಳ ಅದಾಗಿತ್ತು (ಧರ್ಮೋಪದೇಶಕಾಂಡ 12:5-11; 14:22-25). ನ್ಯಾಯಾಂಗದ ವಿಷಯಗಳೂ ಆ ಸ್ಥಳದಲ್ಲಿಯೇ ತೀರ್ಮಾನಿಸಲ್ಪಡಬೇಕಾಗಿತ್ತು (ಧರ್ಮೋಪದೇಶಕಾಂಡ 17:8, 9) ಮನುಷ್ಯನನ್ನು ಕೊಂದವನು ಇಸ್ರಾಯೇಲಿನಲ್ಲಿಯ ಆರು ಪಟ್ಟಣಗಳಲ್ಲಿ ಒಂದಕ್ಕೆ ತಪ್ಪಿಸಿಕೊಂಡು ಓಡಿಹೋಗಬೇಕಾಗಿತ್ತು (ಅರಣ್ಯಕಾಂಡ 35:6). ಇದು ತಮ್ಮ ನಾಡಿನಲ್ಲಿ ವಿಧೇಯರಾಗುವದಕ್ಕೆ ಇಸ್ರಾಯೇಲಿಗಾಗಿ ಒಂದು ನಿಬಂಧನೆಯಾಗಿತ್ತು.

3. ಅವರ ನಿಬಂಧನೆಗಳು ಹಾಗೂ ನ್ಯಾಯತೀರ್ಪುಗಳು ಅಲ್ಲದೇ ಅವರ ನಿಬಂಧನೆಗೆ ಇನ್ನೊಂದು ಭಾಗವಿತ್ತು. ಇದು ಏನನ್ನು ಒಳಗೊಂಡಿತ್ತು? [ಓದಿರಿ ಧರ್ಮೋಪದೇಶಕಾಂಡ 4:13, 14.] ದೇವರು ಅವರೊಂದಿಗೆ ಏನು ಮಾಡಿಕೊಂಡನು? [ಖಾಲಿಯಾದ ಸ್ಥಳದಲ್ಲಿ "ಒಡಂಬಡಿಕೆ" ಎಂದು ತುಂಬಿರಿ. ಹಿಂಬದಿಯಲ್ಲಿ ಒಂದು ಪರ್ವತ ಚಿತ್ರವನ್ನು ಬರೆದು "ಸಿನಾಯಿ ಪರ್ವತ" ಎಂದು ಬರೆಯಿರಿ. ಮತ್ತು ಅದರ ಕೆಳಗೆ "ಒಡಬಂಡಿಕೆ," ಆಮೇಲೆ "ದಶಾಜ್ಞೆಗಳು" ಎಂದು ಬರೆಯಿರಿ. ಪುಟ 132ನ್ನು ನೋಡಿರಿ.]

ಒಂದು ಒಡಂಬಡಿಕೆಯು ಏನಾಗಿದೆ? ಒಡಂಬಡಿಕೆಯು ಒಂದು ಕ್ರಮಬದ್ಧವಾದ ಒಪ್ಪಂದ, ಒಂದು ಕರಾರು, ಒಂದು ಒಡಂಬಡಿಕೆಯಾಗಿರುತ್ತದೆ. ದೇವರು ಇಸ್ರಾಯೇಲಿನೊಂದಿಗೆ ಒಂದು ಒಪ್ಪಂದವನ್ನು ಒಂದು ಒಡಂಬಡಿಕೆಯನ್ನು ಮಾಡಿಕೊಂಡನು ಒಪ್ಪಂದದಲ್ಲಿ ದಶಾಜ್ಞೆಗಳನ್ನು ಕೈಕೊಳ್ಳುವುದು ಇಸ್ರಾಯೇಲ್ಯರ ಜವಾಬ್ದಾರಿಕೆಯಾಗಿತ್ತು.

4. ಒಡಂಬಡಿಕೆಯ ದಶಾಜ್ಞೆಗಳನ್ನು ಇಸ್ರಾಯೇಲ್ಯರು ಕೈಕೊಂಡು ನಡೆದರೆ, ದೇವರು ಏನನ್ನು ಮಾಡುವೆನೆಂದು ಒಪ್ಪಿಕೊಂಡನು? [ಓದಿರಿ ಧರ್ಮೋಪದೇಶಕಾಂಡ 5:33.] ದಶಾಜ್ಞೆಗಳನ್ನು ಕೊಟ್ಟನಂತರ ಆತನು ಇದನ್ನು ವಾಗ್ದಾನ ಮಾಡಿದನು (ಧರ್ಮೋಪದೇಶಕಾಂಡ 5:1-21). ಅವರು ಅದನ್ನು ಕೈಕೊಂಡರೆ, ಅವರಿಗಾಗಿ ಆತನು ಏನು ಮಾಡುವೆನೆಂದು ಒಪ್ಪಿಕೊಂಡನು? ಅವರು ಏನು ಆಗುವರು? [ಖಾಲಿಯಾದ ಸ್ಥಳದಲ್ಲಿ "ಜೀವಿಸುವರು," "ಚೆನ್ನಾಗಿ" ಮತ್ತು "ದೇಶ" ಎಂದು ತುಂಬಿರಿ.] ಇಸ್ರಾಯೇಲಿಗಾಗಿ ದೇವರು ಏನನ್ನು ಮಾಡಲು ತನ್ನನ್ನು ಬಂಧಿಸಿಕೊಂಡನೆಂಬುದನ್ನು ಗಮನಿಸಿರಿ. ಆತನು ಅವರಿಗೆ ಪ್ರಾಪಂಚಿಕ ಆಶೀರ್ವಾದಗಳನ್ನು ಕೊಡುವೆನೆಂದು ವಾಗ್ದಾನ ಮಾಡಿದನು.

5. ಅವರು ಒಡಂಬಡಿಕೆಯನ್ನು ಮುರಿದರೆ, ದೇವರು ಅವರಿಗೆ ಏನನ್ನು ಮಾಡುವನು? [ಓದಿರಿ ಯಾಜಕಕಾಂಡ 26:14, 15, 33.] ಅವರ ದೇಶವು ಅವರಿಂದ ತೆಗೆದು ಹಾಕಲ್ಪಡುವುದು ಮತ್ತು ಏನು ಸಂಭವಿಸುವುದು? [ಖಾಲಿಯಾದ ಸ್ಥಳದಲ್ಲಿ "ಚದುರಿಸಲ್ಪಡುವರು" ಎಂದು ತುಂಬಿರಿ.] ಇಂದು ಯೆಹೂದಿ ಜನರು ಯಾಕೆ ಚದರಿಸಲ್ಪಟ್ಟಿದ್ದಾರೆ? ತಮ್ಮೊಂದಿಗೆ ದೇವರು ಮಾಡಿಕೊಂಡ ಒಪ್ಪಂದವನ್ನು ಅವರು ಮುರಿದದ್ದರಿಂದ ಅವರು ಚದುರಿಸಲ್ಪಟ್ಟಿರುವರು. ಇದರ ಒಂದು ಭಾಗದಂತೆ, ಅವರೂ ಸಹ ತಾವು ಚದುರಿಸಲ್ಪಟ್ಟ ಜನರ ಮಧ್ಯದಲ್ಲಿ "ಗಾದೆಮಾತು" ಆಗಿದ್ದಾರೆ (ಧರ್ಮೋಪದೇಶ ಕಾಂಡ 28:37).

**IV. ಸಮಸ್ಯೆ**

1. ದೇವರು ಇಸ್ರಾಯೇಲಿಗೆ ಕೊಟ್ಟ ನಿಬಂಧನೆಯು ಉತ್ತಮ ಮಟ್ಟದ್ದಾಗಿತ್ತು, ಆದರೆ ದೇವರು ಉದ್ದೇಶಪೂರ್ವಕವಾಗಿ ಅದರೊಳಗೆ ಒಂದು ಸಮಸ್ಯೆಯನ್ನು ಕೊಟ್ಟಿದ್ದನು (ಇಬ್ರಿಯ 8:6, 7). ಅದರೊಳಗೆ ಒಂದು ತಪ್ಪು ಕಟ್ಟಲ್ಪಟ್ಟಿತು.

ನಿಬಂಧನೆಯೊಂದಿಗೆ ತಪ್ಪು ಯಾವುದು ಇತ್ತು? ಅದು ಯಾರಿಗೆ ಕೊಡಲ್ಪಟ್ಟಿತ್ತೋ ಅವರಿಗೆ ಅದು ಏನು ಮಾಡಿತು? [ಓದಿರಿ ಗಲಾತ್ಯ 3:10.] ಅದರ ಅಧೀನತೆಯಲ್ಲಿ ಇದ್ದವರು ಯಾವುದರ ಅಧೀನತೆಯಲ್ಲಿದ್ದರು? [ಖಾಲಿಯಾದ ಸ್ಥಳದಲ್ಲಿ "ಶಾಪ" ಎಂದು ತುಂಬಿರಿ.] ಅವರು ಯಾಕೆ ಶಾಪದ ಅಧೀನತೆಯಲ್ಲಿ ಇದ್ದರು? ಯಾವುದೇ ತಪ್ಪು ಮಾಡದೇ ಅದರ ಪ್ರತಿಯೊಂದು ಸಂಗತಿಯನ್ನು ಅವರು ಕೈಕೊಳ್ಳಬೇಕಾದದ್ದರ ಮೇಲೆ ಅವಲಂಭಿಸಿ ಅವರು ಶಾಪದ ಅಧೀನತೆಯಲ್ಲಿದ್ದರು (ಗಲಾತ್ಯ 3:10). ಒಬ್ಬರಾದರೂ ಇದನ್ನು ಮಾಡಲಿಲ್ಲ.

2. ಈ ಕಾರಣದಿಂದ, ಯಾವ ಪದ್ಧತಿಯನ್ನು ಅದು ಯೋಚಿಸಬಹುದು? [ಓದಿರಿ 2 ಕೊರಿಂಥ 3:6, 7, 9.] ಅದು ಯಾವ ರೀತಿಯ ಸೇವೆಯಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಮರಣ" ಮತ್ತು "ದಂಡನೆ" ಎಂದು ತುಂಬಿರಿ.] ಅದು ಮರಣದ ಸೇವೆಯಾಗಿತ್ತು ಯಾಕಂದರೆ ಅದನ್ನು ಮೀರಿದವರು ಸಾಮಾನ್ಯವಾಗಿ ಮರಣದಿಂದ ಶಿಕ್ಷಿಸಲ್ಪಟ್ಟರು. ನಿಬಂಧನೆಯನ್ನು ಪ್ರತಿಭಟಿಸುತ್ತ ಮುರಿದ ಯಾರಿಗೇ ಆಗಲಿ ಕ್ಷಮಾಪಣೆಯು ಯಾವುದೇ ಅವಕಾಶವು ಮಾಡಿಕೊಡಲ್ಪಟ್ಟಿರಲಿಲ್ಲ (ಅರಣ್ಯಕಾಂಡ 15:27-31).

3. ನಿಬಂಧನೆಯನ್ನು ಅಸಡ್ಡೆ ಮಾಡಿದವನಿಗೆ ಏನು ಸಂಭವಿಸಿತು? [ಓದಿರಿ ಇಬ್ರಿಯ 10:28.] ಏನು ಇಲ್ಲದೆ ಅವನು ಮರಣಕ್ಕೆ ಒಪ್ಪಿಸಲ್ಪಟ್ಟನು? [ಖಾಲಿಯಾದ ಸ್ಥಳದಲ್ಲಿ "ಕನಿಕರ" ಎಂದು ಬರೆಯಿರಿ.] [ಅಧ್ಯಯನ ಪ್ರಶ್ನಾವಳಿಯ ಹಿಂದೆ (ಪುಟ 132ನ್ನು ನೋಡಿರಿ.): "1. ಶಾಪ"; "2. ಮರಣ"; "3. ದಂಡನೆ"; "4. ಕನಿಕರವಿಲ್ಲ"; ಮತ್ತು "5. ಕೃಪೆಯಿಲ್ಲ (ಗಲಾತ್ಯ 5:4)" ಎಂದು ಬರೆಯಿರಿ.] ಅಬ್ರಹಾಮನ ಸಂತತಿಯ ಮುಖಾಂತರ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವೆನೆಂದು ದೇವರು ವಾಗ್ದಾನ ಮಾಡಿದ್ದನು, ಆದರೆ ನಿಬಂಧನೆಯು ಶಾಪವನ್ನು ತಂದಿತು, ಆದುದರಿಂದ ನಿಬಂಧನೆಯ ಮುಖಾಂತರ ಎಲ್ಲಾ ಜನಾಂಗಗಳನ್ನು ಆಶೀರ್ವದಿಸಲು ಯೋಚಿಸಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಧರ್ಮಶಾಸ್ತ್ರದ ಅಧೀನತೆಯಲ್ಲಿದ್ದವರು ಆಶೀರ್ವಾದಿಸಲ್ಪಡುವದರ ಬದಲು ಶಪಿಸಲ್ಪಟ್ಟಿದ್ದರಿಂದ ಅದರ ಉದ್ದೇಶವೇನಾಗಿತ್ತು? ಅಪರಾಧ ಕಾರಣದಿಂದ, ನಮ್ಮನ್ನು ಕ್ರಿಸ್ತನ ಬಳಿಗೆ ತರುವದಕ್ಕಾಗಿ, ನಮ್ಮನ್ನು ಕಾಯುವ ಆಳಿನಂತೆ ಅದು ಕೊಡಲ್ಪಟ್ಟಿತು (ಗಲಾತ್ಯ 3:19, 24).

ಮಾನವ ಜೀವಿತಗಳಾಗಿ ನಾವು, ನಾವು ಯಾರಾಗಿರುವೆವೋ ಆ ಕಾರಣದಿಂದ, ದೇವರಿಗೆ ಸ್ವೀಕಾರಯೋಗ್ಯರಾಗಲು ಸಾಕಷ್ಟು ಒಳ್ಳೆಯವರಾಗಿದ್ದೇವೆಂದು ನಮ್ಮಲ್ಲಿ ಕೆಲವರು ಯೋಚಿಸುತ್ತೇವೆ. ಒಂದು ಅರ್ಥದಲ್ಲಿ ಮನುಷ್ಯನಿಗೆ ಅವನು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಶಕ್ತನಲ್ಲ ಆದರೆ ಅವನಿಗೆ ಸಹಾಯದ ಅಗತ್ಯತೆ ಇರುವುದು ಎಂಬುದನ್ನು ತೋರಿಸಲು ಮನುಷ್ಯನು ಲಾಭಕ್ಕಾಗಿ ಧರ್ಮಶಾಸ್ತ್ರವು ಒಂದು ಪ್ರಯೋಗ ವಾಗಿತ್ತು.

ಇದನ್ನು ಒಬ್ಬ ಮನುಷ್ಯನು ಫ್ಲೋರಿಡಾದಲ್ಲಿಯ ಬೇಸಾಯಗಾರನಿಗೆ ಅವನು ಕ್ಯಾನಡಾದಲ್ಲಿ ಕಿತ್ತಳೆ ಹಣ್ಣುಗಳನ್ನು ಬೆಳಸಲಾರನು ಎಂದು ನಂಬುವಂತೆ ಮಾಡಲು ಪ್ರಯತ್ನಿಸಿದ್ದಕ್ಕೆ ಇದನ್ನು ಹೋಲಿಸಬಹುದು. ಇದನ್ನು ಮಾಡಲು ಅವನು ಕಿತ್ತಳೆ ಹಣ್ಣಿನ

ತೋಟವನ್ನು ಕ್ಯಾನಡಾದ ಉಷ್ಣವಲಯದಲ್ಲಿ ಅತೀ ದಕ್ಷಿಣ ಇಳುಕಲಿನಲ್ಲಿ ಅವನು ಆಯ್ಕೆಮಾಡಬೇಕಾಗಿತ್ತು. ಹಿಮ, ಮಂಜು, ಸೋಲುಗಳಿಂದ ಹಲವಾರು ವರ್ಷ ದಾಟಿದ ತರುವಾಯ ಕ್ಯಾನಡಾದಲ್ಲಿ ಕಿತ್ತಳೆಹಣ್ಣುಗಳು ಬೆಳೆಯುವದಿಲ್ಲ ಎಂಬುದು ಬೇಸಾಯಗಾರನಿಗೆ ದೃಢವಾಗುವುದು.

ಅದೇ ರೀತಿಯಲ್ಲಿ, ನಂಬಿಗಸ್ತನಾದ ಅಬ್ರಹಾಮನನ್ನು ದೇವರು ಆಯ್ಕೆ ಮಾಡಿಕೊಂಡನು ಮತ್ತು ಅವನ ವಂಶಜರನ್ನು ದುಷ್ಟ ಜನಾಂಗಗಳಿಂದ ಬೇರೆ ಮಾಡಿದನು, ಆ ಮೇಲೆ ಕೈಕೊಳ್ಳಲು ಅವರಿಗೆ ಪರಿಪೂರ್ಣ ಮಟ್ಟವನ್ನು ಕೊಟ್ಟನು (ರೋಮಾಪುರ 7:12). ಯಾವುದೇ ಜನಾಂಗವು ತನ್ನ ಸ್ವಂತದಿಂದ ನೀತಿಯುಳ್ಳದ್ದಾಗ ಬಹುದಾಗಿದ್ದರೆ, ಇಸ್ರಾಯೇಲ ಜನಾಂಗವು ಹಾಗೆ ಮಾಡಲು ಅತ್ಯುತ್ತಮ ಅವಕಾಶದ ಸಾಧ್ಯತೆಯುಳ್ಳದ್ದಾಗಿತ್ತು, ಆದರೆ ಅವರೆಲ್ಲರೂ ಪಾಪ ಮಾಡಿದರು (ರೋಮಾಪುರ 3:9, 10). ದೇವರು, ಎಲ್ಲಾ ಸಮಯಗಳಲ್ಲಿ, ಮನುಷ್ಯನು ತನ್ನಷ್ಟಕ್ಕೆ ತಾನೇ ಅದನ್ನು ಮಾಡಿಕೊಳ್ಳಲಾರನು, ಆದರೆ ಅವರ ಪಾಪಗಳನ್ನು ಕ್ಷಮಿಸಲಿಕ್ಕೆ ಆತನ ಕುಮಾರನ ಮರಣದ ಆಗತ್ಯತೆಯಿರುತ್ತದೆ. ಧರ್ಮಶಾಸ್ತ್ರದ ಉದ್ದೇಶವು ನಮ್ಮ ಅಪರಾಧಗಳನ್ನು ಮುಚ್ಚಲು ಕರುಣೆಯನ್ನು ಒದಗಿಸಬಲ್ಲ ರಕ್ಷಕನನ್ನು ತೋರಿಸುವುದಾಗಿತ್ತು.

**V. ದೇವರ ಯೋಜನೆ**

1. ಅಬ್ರಹಾಮನ ಸಂತತಿಯ ಮುಖಾಂತರ ಜಗತ್ತನ್ನು ಆಶೀರ್ವದಿಸಲು ದೇವರು ಯೋಜಿಸಿದನು. ದೇವರ ಯೋಜನೆಯನ್ನು ಧರ್ಮಶಾಸ್ತ್ರವು ರದ್ದುಗೊಳಿಸಲಾರದು (ಗಲಾತ್ಯ 3:17). ಧರ್ಮಶಾಸ್ತ್ರವು ಆಶೀರ್ವಾದವನ್ನು ಒದಗಿಸುವದಾದರೆ, ಯೇಸುವಿನ ಮರಣವು ಅನಾವಶ್ಯಕವಾಗಿತ್ತು (ಗಲಾತ್ಯ 2:21). ಈ ಆಶೀರ್ವಾದವನ್ನು ಒದಗಿಸಲು ಧರ್ಮಶಾಸ್ತ್ರಕ್ಕೆ ಮತ್ತು ಒಡಂಬಡಿಕೆಗೆ ದೇವರು ಯೋಜಿಸಲಿಲ್ಲ.

ದೇವರು ಏನನ್ನು ಮಾಡಲು ಯೋಜಿಸಿದನು? [ಓದಿರಿ ಯೆರೆಮೀಯ 31:31, 32.] ದೇವರು ತಾನು *ಏನು* ಮಾಡುವನೆಂದು ವಾಗ್ದಾನ ಮಾಡಿದನು? ಅದು ಇಸ್ರಾಯೇಲಿನೊಂದಿಗೆ ದೇವರು ಮಾಡಿದ ಒಡಂಬಡಿಕೆಯಂತೆ *ಇತ್ತೋ?* [ಖಾಲಿಯಾದ ಸ್ಥಳದಲ್ಲಿ "ಹೊಸ" ಮತ್ತು "ಇಲ್ಲ" ಎಂದು ತಂಬಿರಿ.]

2. ಹೊಸ ಒಡಂಬಡಿಕೆಯು ಏನನ್ನು ಒದಗಿಸುವುದು? [ಓದಿರಿ ಇಬ್ರಿಯ 8:12.] ದೇವರು ಹೊಸ ಒಡಂಬಡಿಕೆಯ ಪ್ರಕಾರ ತಾನು *ಏನಾಗಿರುವೆನೆಂದು* ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ದಯೆಯುಳ್ಳವನು" ಎಂದು ತುಂಬಿರಿ.]

3. ಮೊದಲನೆಯ ಒಡಂಬಡಿಕೆಯಲ್ಲಿ ದಯೆಯು ಇರುವಷ್ಟು, ಒಳಗೊಂಡಿರದಿದ್ದರೇ ಅವರು ದಯೆಯನ್ನು ಹೊಂದಲಾರರು ಎಂದು ಅರ್ಥವಾಗುತ್ತದೆಯೋ ಅಬ್ರಹಾಮನ ಮುಖಾಂತರ ವಾಗ್ದಾನ ಮಾಡಲ್ಪಟ್ಟ ಆಶೀರ್ವಾದವು, ಧರ್ಮಶಾಸ್ತ್ರದ ಮೇಲೆ ಅವಲಂಭಿಸಿ *ಅಲ್ಲ,* ಆದರೆ ಯಾವುದರ ಮೇಲೆ ಅವಲಂಭಿಸಿ ಅವರನ್ನು ಆಶೀರ್ವಾದಿಸಬಹುದು? [ಓದಿರಿ ಇಬ್ರಿಯ 9:15.] *ಯಾವ* ಒಡಂಬಡಿಕೆಯ ಅಧೀನತೆಯಲ್ಲಿ ಯೇಸುವು ಅಪರಾಧಗಳಿಗಾಗಿ ಮರಣಹೊಂದಿದನು? [ಖಾಲಿಯಾದ ಸ್ಥಳದಲ್ಲಿ "ಮೊದಲನೆಯ" ಎಂದು ತುಂಬಿರಿ.] ಯಾರಾದರೂ ದೇವರ ಬಳಿಗೆ ಬಂದರೆ, ಅದು ಯೇಸುವಿನ ಮುಖಾಂತರವೇ ಮಾಡಲ್ಪಡುವುದು (ಯೋಹಾನ 14:6). ಇದು ಯಾವಾಗಲೂ ದೇವರ ಯೋಜನೆಯಾಗಿತ್ತು, ಜಗತ್ತಿನ ಪಾಪಗಳು ಯೇಸುವಿನ ರಕ್ತದ ಮುಖಾಂತರ *ಮಾತ್ರವೇ* ಕ್ಷಮಿಸಲ್ಪಡಬಹುದು. ಧರ್ಮಶಾಸ್ತ್ರವು ದಯೆಯನ್ನೂ ಕ್ಷಮಾಪಣೆಯನ್ನೂ ಒದಗಿಸಲಿಲ್ಲ. ಅದು ತನ್ನ ಅಧೀನತೆಯಲ್ಲಿ ಇದ್ದವರಿಗೆ ಶಾಪವನ್ನು

ತಂದಿತು.

4. *ಹೊಸದು* ಯಾವಾಗ ಜಾರಿಯಲ್ಲಿ ಬಂದಿತು? [ಓದಿರಿ ಇಬ್ರಿಯ 9:16, 17.] ಅದು *ಯಾವಾಗ* ಪರಿಣಾಮಕಾರಿಯಾದದ್ದಾಗಿ ಆಯಿತು [ಖಾಲಿಯಾದ ಸ್ಥಳದಲ್ಲಿ "ಮರಣ" ಎಂದು ತುಂಬಿರಿ.] ಮರಣಶಾಸನ ಅದನ್ನು ಮಾಡಿದವನು ಸಾಯುವವರಗೆ ಸತ್ತ ದಾಖಲೆಯಾಗಿರುತ್ತದೆ. ಯೇಸುಕ್ರಿಸ್ತನ ಹೊಸ ಒಡಂಬಡಿಕೆಯೊಂದಿಗೆ ಇದು ಸತ್ಯ ವಾಗಿದೆ. ಯೇಸುವಿನ ಮರಣವು ಅದನ್ನು ಪರಿಣಾಮಕಾರಿಯಾದದ್ದನ್ನಾಗಿ ಮಾಡಿತು.

5. ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯನ್ನು ತೆಗೆದು ಹಾಕುವುದೋ? [ಓದಿರಿ ಇಬ್ರಿಯ 10:9.] ಎರಡನೆಯದರೊಂದಿಗೆ ಆತನು *ಏನು* ಮಾಡುವಂತೆ ಮೊದಲನೆಯದರೊಂದಿಗೆ ಆತನು *ಏನನ್ನು* ಮಾಡಿದನು? [ಖಾಲಿಯಾದ ಸ್ಥಳದಲ್ಲಿ "ತೆಗೆದುಕೊಂಡನು" ಮತ್ತು "ಸ್ಥಾಪಿಸು" ಎಂದು ತುಂಬಿರಿ.] ಯೇಸುವು ತನ್ನ ಮರಣದಲ್ಲಿ ಎರಡನೆಯ ಒಡಂಬಡಿಕೆಯನ್ನು ಜಾರಿಯಲ್ಲಿ ತಂದಂತೆ, ಆತನು ಮೊದಲನೆಯದನ್ನು ತೆಗೆದು ಹಾಕಿದನು. [*ಹಿಂದಿನ ಪುಟದಲ್ಲಿ* "ಮೊದಲನೆಯ (ಹಳೇ) ಒಡಂಬಡಿಕೆ" ಮತ್ತು "ಎರಡನೆಯ (ಹೊಸ) ಒಡಂಬಡಿಕೆ" ಎಂದು ಬರೆಯಿರಿ. ಪುಟ 132ನ್ನು ನೋಡಿರಿ.]

6. ಇವುಗಳಲ್ಲಿ ಯಾವುದು ಹೆಚ್ಚು ಉತ್ತಮವಾದದ್ದು ಮತ್ತು ಯಾಕೆ? [ಓದಿರಿ ಇಬ್ರಿಯ 8:6.] ಎರಡನೆಯದ ವಾಗ್ದಾನಗಳು ಮೊದಲನೆಯದರ ವಾಗ್ದಾನಗಳೊಂದಿಗೆ *ಹೇಗೆ* ಹೋಲಿಕೆಯಾಗುತ್ತವೆ? ಈ ವಾಗ್ದಾನಗಳು ಏನಾಗಿರುತ್ತವೆ? [ಖಾಲಿಯಾದ ಸ್ಥಳದಲ್ಲಿ "ಹೆಚ್ಚು ಉತ್ತಮ" ಎಂದು ತುಂಬಿರಿ.] ಮೊದಲನೆಯ ಒಡಂಬಡಿಕೆಯನ್ನು ಅವರು ಕೈಕೊಂಡರೆ ಅವರಿಗೆ ಯಾವ ವಾಗ್ದಾನ ಕೊಡಲ್ಪಟ್ಟಿತು? ಸಮೃದ್ಧವಾದ ನಾಡು ಅವರಿಗೆ ವಾಗ್ದಾನವಾಗಿ ಕೊಡಲ್ಪಡಲಿಲ್ಲವೇ? (ಧರ್ಮೋಪದೇಶಕಾಂಡ 5:33)? ಹೆಚ್ಚು ಉತ್ತಮವಾದದ್ದು ಯಾವುದು ನಮಗೆ ವಾಗ್ದಾನ ಮಾಡಲ್ಪಟ್ಟಿದೆ? [ಓದಿರಿ 1 ಪೇತ್ರ 1:3, 4.] ಇಸ್ರಾಯೇಲ ದೇಶದೊಳಗೆ ಸಮೃದ್ಧಿಯೊಂದಿಗೆ ಜೀವಿತಕ್ಕಿಂತ ಹೆಚ್ಚಾಗಿ ಆಶೀರ್ವಾದವಾಗಿ "ಪರಲೋಕವು" ಉತ್ತಮವಾಗಿರುವದಲ್ಲವೇ?

ಹಳೇ ಒಡಂಬಡಿಕೆಗಿಂತ ಹೆಚ್ಚು ಉತ್ತಮವಾದ ಯಾವ ಲಾಭಗಳನ್ನು ಹೊಸ ಒಡಂಬಡಿಕೆಯು ಒದಗಿಸುತ್ತದೆ? [*ಹಿಂಬದಿಯಲ್ಲಿ* ಹಳೇ ಒಡಂಬಡಿಕೆಯು ಒದಗಿಸಿದ್ದರ ಪಕ್ಕದಲ್ಲಿ ಇವುಗಳನ್ನು ಬರೆಯಿರಿ: "1. ಆಶೀರ್ವಾದ (ಗಲಾತ್ಯ 3:14)"; "2. ಜೀವ (ಗಲಾತ್ಯ 3:21)"; "3. ನೀತಿ (ಗಲಾತ್ಯ 2:21)"; "4. ದಯೆ (ಇಬ್ರಿಯ 8:12)"; "5. ಕೃಪೆ (ಯೋಹಾನ 1:17)." ಪುಟ 132ನ್ನು ನೋಡಿರಿ.]

ಈ ಎರಡು ಒಡಂಬಡಿಕೆಗಳಲ್ಲಿ ಯಾವುದರ ಅಧೀನತೆಯಲ್ಲಿ ಜೀವಿಸಲು ಬಯಸುವಿರಿ? ಯಾಕೆ? ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ನಮಗೆ ಹೆಚ್ಚು ಉತ್ತಮ ಲಾಭಗಳು ಮತ್ತು ಹೆಚ್ಚು ಉತ್ತಮವಾದ ವಾಗ್ದಾನಗಳು ಇರುತ್ತವೆ. ನಿಶ್ಚಯ ವಾಗಿಯೂ ನಾವು ಮೊದಲನೆಯ ಒಡಂಬಡಿಕೆಯ ಅಧೀನತೆಯಲ್ಲಿ ಹೋಗಲು ಬಯಸುವದಿಲ್ಲ.

[ಈ ಹಂತದಲ್ಲಿ ಶಿಕ್ಷಕನು ಇದನ್ನು ವಿವರಿಸಲು ಬಯಸಬಹುದು, ನೈತಿಕ ತತ್ವ ಗಳು ನಿತ್ಯವಾದವುಗಳಾಗಿರುತ್ತವೆ, ಮತ್ತು ಹೊಸ ಒಡಂಬಡಿಕೆಯು, ಕೊಲ್ಲಬಾರದು, ವ್ಯಭಿಚಾರ ಮಾಡಬಾರದು, ಸುಳ್ಳು ಹೇಳಬಾರದು ಇತ್ಯಾದಿಗಳಂಥ ನೈತಿಕ ತತ್ವಗಳನ್ನು ತೆಗೆದು ಹಾಕುವದಿಲ್ಲ. ಹೊಸ ಒಡಂಬಡಿಕೆಯು ಈ ತತ್ವಗಳನ್ನು *ಒಳಗೊಂಡಿರುತ್ತದೆ.* ಹಾಗಿದ್ದರೂ ಸಬ್ಬತ್ತನ್ನು ಒಳಗೊಂಡಿರುವದಿಲ್ಲ. ಸಬ್ಬತ್ತು ಇಸ್ರಾಯೇಲ್ಯರಿಗೆ ಅವರ ವಿಶ್ರಾಂತಿಯ ವಿಶೇಷ ದಿನವಾಗಿ, ಅವರಿಗಾಗಿ ಒಂದು ಸ್ಮಾರಕ ದಿನವಾಗಿ, ಅವರು ಯಾವುದೇ ಕೆಲಸ ಮಾಡದೇ ವಿಶ್ರಾಂತಿ ಪಡೆದುಕೊಂಡು ಐಗುಪ್ತ ದೇಶದಲ್ಲಿ ತಾವು

ಗುಲಾಮರಾಗಿದ್ದೇವೆಂದು ಜ್ಞಾಪಿಸಿಕೊಳ್ಳುವದಕ್ಕಾಗಿ ಕೊಡಲ್ಪಟ್ಟಿತ್ತು (ಧರ್ಮೋಪದೇಶ ಕಾಂಡ 5:15). ಸೃಷ್ಟಿಯು ಒಂದು ಸ್ಮಾರಕವಾದ ದಿನವಾಗಿ ಪ್ರತಿಷ್ಠಿಸಲ್ಪಟ್ಟಿದ್ದಾಗಿರಲಿಲ್ಲ. ಐಗುಪ್ತದಲ್ಲಿ ವಿಶ್ರಾಂತಿಯಿಲ್ಲದ ದಾಸತ್ವದಿಂದ ಅವರ ಬಿಡುಗಡೆಯನ್ನು ಜ್ಞಾಪಿಸಿಕೊಳ್ಳಲು ಇಸ್ರಾಯೇಲ್ಯರಿಗೆ ದೇವರ ಏಳನೆಯ ದಿನವನ್ನು ಕೊಡಲು ದೇವರು ಆಯ್ದುಕೊಂಡನು ಯಾಕಂದರೆ ಏಳನೆಯ ದಿನದಲ್ಲಿ ಆತನು ವಿಶ್ರಾಂತಿ ಪಡೆದಿದ್ದನು (ವಿಮೋಚನಕಾಂಡ 20:11). ವಾರದ ಮೊದಲನೆಯ ದಿನವು, ಸಬ್ಬತ್ತ್ ದಿನದ ನಂತರದ ದಿನವು (ಮತ್ತಾಯ 28:1; ಮಾರ್ಕ 16:1; ಲೂಕ 24:1) ಕ್ರೈಸ್ತರು ಒಂದು ಗೂಡಿ ಬಂದ (ಅಪೊಸ್ತಲರ ಕೃತ್ಯಗಳು 20:7) ಇನ್ನೂ ಒಂದುಗೂಡಿಬರುವ ದಿನವಾಗಿದೆ. ವಾರದ ಮೊದಲನೆಯ ದಿನವು ಕ್ರೈಸ್ತರಿಗೆ, ಆ ದಿನದಂದು ಯೇಸುವಿನ ಪುನರುತ್ಥಾನದ ಮೇಲೆ ಅವಲಂಬಿಸಿ, ಪಾಪದ ಮತ್ತು ಮರಣದಿಂದ ತಮ್ಮ ವಿಮೋಚನೆಯನ್ನು ಜ್ಞಾಪಿಸಿಕೊಳ್ಳುವ ದಿನದಂತೆ ಒಂದು ಸ್ಮಾರಕ ದಿನವಾಗಿದೆ. ಇಸ್ರಾಯೇಲ್ಯರಿಗೆ ವಿಶ್ರಾಂತಿಯ ದಿನದಂತೆ ಸಬ್ಬತ್ತಿನಂತೆ *ದೈಹಿಕ* ವಿಶ್ರಾಂತಿಯಾಗಿರದೇ ಅದು ಅವರಿಗೆ *ಆತ್ಮಿಕ ವಿಶ್ರಾಂತಿಯ* ಒಂದು ದಿನವಾಗಿತ್ತು.]

ಈ ಪಾಠದಲ್ಲಿ ಮಾನವ ಜನಾಂಗವನ್ನು ರಕ್ಷಿಸಲು ಒಬ್ಬ ರಕ್ಷಕನ ಅವಶ್ಯಕತೆಯಿದೆ, ಅವರನ್ನು ರಕ್ಷಿಸುವದಕ್ಕಾಗಿ ಒಂದು ನಿಬಂಧನೆಯಲ್ಲ, ಮತ್ತು ಮಾನವಕುಲವನ್ನು ರಕ್ಷಿಸುವದಕ್ಕಾಗಿ ಆತನ ಯೋಜನೆಯು ಯಾವಾಗಲೂ ಶಿಲುಬೆಯ ಮೇಲೆ ಯೇಸುವಿನ ಮರಣದ ಮುಖಾಂತರ ಇತ್ತೆಂಬುದನ್ನು ಒಂದು ಜನಾಂಗದ ಮುಖಾಂತರ ತೋರಿಸುವುದು ದೇವರ ಯೋಜನೆಯಾಗಿತ್ತೆಂಬುದನ್ನೂ ಗಮನಿಸಿದ್ದೇವೆ.

**ಸಾರಾಂಶ**

ಈ ಅಧ್ಯಯನ ಪ್ರಶ್ನಾವಳಿಯಲ್ಲಿ ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವ ದೇವರ ಯೋಜನೆಯ ಪ್ರಕಟನೆಯನ್ನು ನಾವು ಪರೀಕ್ಷಿಸಿದ್ದೇವೆ. ಇದು ಬೈಬಲಿನ ಮುಖ್ಯ ಪ್ರಸ್ತಾಪವಾಗಿದೆ.

ಈ ಪಾಠವನ್ನು ಸಾರಾಂಶಗೊಳಿಸಲಿಕ್ಕೆ ಒಂದು ಉತ್ತಮ ಮಾರ್ಗವು ಈ ಪಾಠದಲ್ಲಿಯ ಪ್ರಮುಖ ಪ್ರಶ್ನೆಗಳಿಗೆ ಉತ್ತರಕೊಡುವುದಾಗಿದೆ.

I. *ದೇವರು ಅಬ್ರಹಾಮನಿಗೆ ಯಾವ ಯೋಜನೆಯನ್ನು ಪ್ರಕಟಿಸಿದನು?* ದೇವರು ಅಬ್ರಹಾಮನಿಗೆ, ಅವನನ್ನು ಒಂದು ದೊಡ್ಡ ಜನಾಂಗವನ್ನಾಗಿ ಮಾಡುವೆನು (ಹಳೇ ಒಡಂಬಡಿಕೆಯ ಮುಖ್ಯ ಪ್ರಸ್ತಾಪ) ಮತ್ತು ಅವನ ಸಂತತಿಯಲ್ಲಿ ಒಬ್ಬಾತನ ಮುಖಾಂತರ ಅಂದರೆ ಯೇಸುವಿನ ಮುಖಾಂತರ ಎಲ್ಲಾ ಜನಾಂಗಗಳು ಆಶೀರ್ವದಿಸುವೆನು ಎಂದು ತಿಳಿಯ ಪಡಿಸಿದನು (ಹೊಸ ಒಡಂಬಡಿಕೆಯ ಮುಖ್ಯ ಪ್ರಸ್ತಾಪ).

II. *ದೊಡ್ಡ ಜನಾಂಗವು ಹೇಗೆ ಬೆಳವಣಿಗೆ ಹೊಂದಿತು?* ಐಗುಪ್ತವನ್ನು ಪ್ರವೇಶಿಸಿದ ಅಬ್ರಹಾಮ, ಇಸಾಕ, ಮತ್ತು ಯಾಕೋಬನ ಸಂತತಿಯ 70 ಜನರಿಂದ ಒಂದು ದೊಡ್ಡ ಜನಾಂಗವು ಬೆಳೆಯಿತು. ಅವರು ಮೋಶೆಯ ಮತ್ತು ಆರೋನನ ನಾಯಕತ್ವದಲ್ಲಿ ಐಗುಪ್ತನ್ನು ಬಿಟ್ಟಾಗ ಸೈನ್ಯದಲ್ಲಿ 603,550 ಜನರನ್ನು ಮತ್ತು 22,000 ಜನ ಪುರುಷರನ್ನು ಲೇವಿಗೋತ್ರದಲ್ಲಿ, ಯಾಜಕ ಕುಲದಲ್ಲಿ, ಒಳಗೊಂಡು ಮೂರು ಮತ್ತು ಐದು ಮಿಲಿಯ ಸಂಖ್ಯೆಯ ಮಧ್ಯದಲ್ಲಿ ಜನರಿದ್ದರು.

III. *ಇಸ್ರಾಯೇಲ ಜನಾಂಗದ ನಿಬಂಧನೆ ಯಾವುದಿತ್ತು?* ಇಸ್ರಾಯೇಲ ದೇಶದಲ್ಲಿ ಒಂದು ಜನಾಂಗವಾಗಿ ಕೈಕೊಳ್ಳುವದಕ್ಕಾಗಿ ಸಿನಾಯಿ ಪರ್ವತದ ಬಳಿಯಲ್ಲಿ ದೇವರು ಅವರಿಗೆ ಒಂದು ನಿಬಂಧನೆಯನ್ನು ಕೊಟ್ಟನು. ಒಡಂಬಡಿಕೆಯು (ಅವರೊಂದಿಗಿನ ದೇವರ ಒಪ್ಪಂದವು) ಅದರ ನಿಬಂಧನೆಯ ಒಂದು ಭಾಗವಾಗಿತ್ತು (ರೋಮಾಪುರ

13:8-10). ದೇವರೊಂದಿಗೆ ಈ ಒಪ್ಪಂದವನ್ನು ಕೈಕೊಂಡರೆ, ಅವರು ದೇಶದಲ್ಲಿ ಸಮೃದ್ಧಿಯೊಂದಿಗೆ ದೀರ್ಘಕಾಲ ಜೀವಿಸುವರು, ಆದರೆ ಒಡಂಬಡಿಕೆಯನ್ನು ಅವರು ಮುರಿದರೆ ಅವರು ದೇಶದಿಂದ ಹೊರಗೆ ಹಾಕಲ್ಪಡುವರು ಮತ್ತು ಜನಾಂಗಗಳಲ್ಲಿ ಚದುರಿಸಲ್ಪಡುವರು.

IV. *ಮೊದಲನೆಯ ಒಡಂಬಡಿಕೆಯೊಂದಿಗೆ ಯಾವ ಸಮಸ್ಯೆಯಿತ್ತು?* ಧರ್ಮಶಾಸ್ತ್ರದ ಆಧೀನತೆಯಲ್ಲಿದ್ದವರು ಅದನ್ನು ಕೈಕೊಳ್ಳದ್ದರಿಂದ, ಧರ್ಮಶಾಸ್ತ್ರವು ಅವರನ್ನು ಶಾಪದೊಳಗೆ ದಂಡನೆಯೊಳಗೆ ಮತ್ತು ಮರಣದ ಶಿಕ್ಷೆಯೊಳಗೆ ತಂದಿತು. ಇದು ಸತ್ಯವಾಗಿರಲಿಕ್ಕೆ ಕಾರಣವು ಇದು ದಯೆಯನ್ನು ಒದಗಿಸದೇ ಇದ್ದದ್ದು.

V. *ದಯೆಯನ್ನು ಒದಗಿಸಲು ದೇವರು ಏನನ್ನು ಮಾಡಿದನು?* ದೇವರು ಒಂದು ಹೊಸ ಒಡಂಬಡಿಕೆಯನ್ನು, ಒಂದು ಹೊಸ ಒಪ್ಪಂದವನ್ನು, ದಯೆಯನ್ನು ಒದಗಿಸದಂಥದ್ದುನ್ನು ತಂದನು. ಯೇಸುವಿನ ಮರಣದ ಮುಖಾಂತರ, ಮೊದಲನೆಯ ಒಡಂಬಡಿಕೆಯ ಶಾಪವು ತೆಗೆದುಹಾಕಲ್ಪಟ್ಟಿತು, ಒಂದು ಹೊಸ ಒಡಂಬಡಿಕೆಯು ಮಂಜೂರು ಮಾಡಲ್ಪಟ್ಟಿತು. *ಮೊದಲನೆಯದು ಎರಡನೆಯದರಿಂದ*, ಒಂದು *ಹೊಸ* ಮತ್ತು ಉತ್ತಮವಾದ ಒಡಂಬಡಿಕೆಯಿಂದ ಬದಲಾಯಿಸಲ್ಪಟ್ಟಿತು. ಇದು ಹೆಚ್ಚು ಉತ್ತಮ ವಾಗ್ದಾನಗಳ ಮೇಲೆ ಕಟ್ಟಲ್ಪಟ್ಟಿತ್ತು (ದೇಶದಲ್ಲಿಯ ಸಮೃದ್ಧಿಯೊಂದಿಗಿನ ದೀರ್ಘ ಜೀವನದ ಬದಲು ಪರಲೋಕದಲ್ಲಿ ನಿತ್ಯಜೀವ).

ಇಂದು ನಾವು ಹೊಸ ಒಡಂಬಡಿಕೆಯ ಮಾತುಗಳಿಂದ ಜೀವಿಸಬೇಕಾಗಿದೆ. *ಮೊದಲಿನದರ* ಅಧೀನತೆಯಲ್ಲಿ ಇರಲು ನಾವು ಬಯಸುವದಿಲ್ಲ, ಯಾಕಂದರೆ ಅದರ ಅಧೀನತೆಯಲ್ಲಿ ಜೀವಿಸಲು ಪ್ರಯತ್ನಿಸಿದವರು ಖಂಡಿಸಲ್ಪಟ್ಟರು ಮತ್ತು ಧರ್ಮಶಾಸ್ತ್ರದ ಶಾಪದ ಅಧೀನತೆಯೊಳಗೆ ಬಂದರು. ನಾವು *ಎರಡನೆಯದರಿಂದ* ಜೀವಿಸಬೇಕು. ಯಾಕಂದರೆ ಅವರ ಮೂಲಕವಾಗಿ ನಾವು ಕೃಪೆಯನ್ನು, ದಯೆಯನ್ನು ಮತ್ತು ಪರಲೋಕದಲ್ಲಿ ನಿತ್ಯಜೀವದ ನಿರೀಕ್ಷೆಯನ್ನು ಹೊಂದಿಕೊಳ್ಳುತ್ತೇವೆ.

ಈ ಪಾಠವು ಅನೇಕ ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ: (1) ಕ್ರೈಸ್ತರು ಹಳೇ ಒಡಂಬಡಿಕೆಯ ನಿಯಮಗಳನ್ನು ಕೈಕೊಳ್ಳದಿರುವದಕ್ಕೆ ಕಾರಣಗಳು; (2) ಶನಿವಾರ ಅಂದರೆ ಸಬ್ಬತ್ತ ದಿನದಂದು ಕ್ರೈಸ್ತರು ವಿಶ್ರಾಂತಿ ತೆಗೆದು ಕೊಳ್ಳದಿರುವದಕ್ಕೆ ಕಾರಣ; (3) ಯೇಸುವಿನ ಮರಣದ ನಂತರದ ಮಾರ್ಪಾಟುಗಳು, ಜನರು ಹೇಗೆ ಕ್ರೈಸ್ತರಾಗುವರೆಂಬ ಉದಾಹರಣೆಗಳನ್ನು ಯೋಚಿಸಲಿಕ್ಕೆ ಕಾರಣ; ಮತ್ತು (4) ಕ್ರೈಸ್ತರು ಕ್ರೈಸ್ತ ಜೀವಿತ ಹೇಗೆ ಜೀವಿಸಬೇಕೆಂದು ಕಲಿಯಲಿಕ್ಕಾಗುವಂತೆ ಹೊಸ ಒಡಂಬಡಿಕೆಯನ್ನು ಅಧ್ಯಯನ ಮಾಡುವದಕ್ಕೆ ಕಾರಣ.

[ಪಾಠವನ್ನು ಸಂಕ್ಷೇಪಗೊಳಿಸಿದ ನಂತರ, ಶಿಕ್ಷಕನು ಧರ್ಮಶಾಸ್ತ್ರದ ಕಡೆಗೆ ವಿದ್ಯಾರ್ಥಿಯ ಮನೋಭಾವನೆಯ ಬಗ್ಗೆ ಅವನನ್ನು ಕೇಳಬಹುದು; ಅವನು ಧರ್ಮಶಾಸ್ತ್ರವನ್ನು ಓದಿದ್ದರೆ, ಅದರಲ್ಲಿ ಬೋಧಿಸುವದೆಲ್ಲವನ್ನೂ ಕೈಕೊಳ್ಳಲು ಯೋಚಿ ಸುವನೋ ಎಂದು ಕೇಳಬಹುದು; ಮತ್ತು ಧರ್ಮಶಾಸ್ತ್ರದಲ್ಲಿ ಪಾಪಗಳ ಕ್ಷಮಾಣೆಗಾಗಿ ಯಾವುದು ಅಗತ್ಯವಾಗಿದೆಯೆಂಬುದನ್ನು ಅವನು ಅಧ್ಯಯನ ಮಾಡಿದ್ದರೆ, ಹೊಸ ಒಡಂಬಡಿಕೆಯಲ್ಲಿ ಯಾವುದರ ಅಗತ್ಯತೆಯಿದೆ ಎಂದು ಕೇಳಬಹುದು.

ಮುಂದಿನ ಅಧ್ಯಯನದಲ್ಲಿ ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಕ್ಷಮಾಪಣೆಯ ಬಗ್ಗೆ ಯೋಚಿಸುವೆವು ಎಂದು ಹೇಳಿ ಶಿಕ್ಷಕನು ಇನ್ನೊಂದು ಅಧ್ಯಯನಕ್ಕಾಗಿ ವ್ಯವಸ್ಥೆ ಮಾಡಬೇಕು.]

© 2009 Truth for Today